# ಬ್ರಾನ್‌ಫೆನ್ ಬೆನ್ನರ್‌ರವರ ಸಿದ್ಧಾಂತದ ದುರುಪಯೋಗಗಳು

ಉಳಿದ ಅಧ್ಯಯನಗಳನ್ನು ಮೂರು ಗುಂಪುಗಳಾಗಿ ಮಾಡಬಹುದು. ಪ್ರತಿಯೊಂದು ಗುಂಪಿನಲ್ಲೂ ಲೇಖಕರು ತಾವು ಬ್ರಾನ್‌ಫೆನ್ ಬ್ರೆನ್ನರ್‌ರ ಸಿದ್ಧಾಂತವನ್ನು ಅಥವಾ ಬ್ರಾನ್‌ಫೆನ್ ಬೆನ್ನರ್‌ರ ಜೈವಿಕ ಪರಿಸರವಾದೀ ಮಾದರಿಯನ್ನು ಅಥವಾ ಆ ಅರ್ಥಬರುವಂತಹ ಪದಗಳನ್ನು ಸ್ಪಷ್ಟವಾಗಿ ಹೇಳಿದ್ದರು. ಆದರೆ, ಮೊದಲ ಗುಂಪಿನವರು ಬ್ರಾನ್‌ಫೆನ್ ಬೆನ್ನರ್‌ರ 1970ರ ಲೇಖನಗಳನ್ನು ಉಪಯೋಗಿಸಿದ್ದರು, ಎರಡನೆಯ ಗುಂಪಿನವರು 1980ರ ಲೇಖನಗಳ ಉಲ್ಲೇಖಗಳನ್ನು ಸೇರಿಸಿದ್ದರು, ಕೊನೆಯ ಗುಂಪಿನವರು ಬ್ರಾನ್‌ಫೆನ್ ಬೆನ್ನರ್‌ರವರ 1990ರ ಕೆಲಸದ ಬಗ್ಗೆ ಕೇಂದ್ರೀಕರಿಸಿದ್ದರು ಆದರೆ ಅವರ್ಯಾರೂ ಸಿದ್ಧಾಂತದ ಪರಿಪಕ್ವ ಭಾಗವು ಏನು ಹೇಳುತ್ತದೆಂಬುದರ ಕಡೆಗೆ ಅಂದರೆ ಸಾಮೀಪ್ಯ ಪ್ರಕ್ರಿಯೆಗಳ ಬಗ್ಗೆ ಗಮನ ಕೊಟ್ಟಿರಲಿಲ್ಲ. 1970ರಲ್ಲಿಯೂ ಅವರ ಸಿದ್ಧಾಂತವು ಬೆಳವಣಿಗೆಯಲ್ಲಿ ಸಂದರ್ಭದ ಪ್ರಭಾವವನ್ನು ಹೇಳುವುದರ ಬದಲು ಸಂದರ್ಭ ಮತ್ತು ವ್ಯಕ್ತಿಗಳ ಅಂತರ್ ಕ್ರಿಯೆಗಳನ್ನು ಕೇಂದ್ರೀಕರಿಸಿತ್ತು, ಮತ್ತು 1994ರ ನಂತರದ ಸಿದ್ಧಾಂತವು ಸಾಮೀಪ್ಯ ಪ್ರಕ್ರಿಯೆಗಳು "ಬೆಳವಣಿಗೆಯ ಇಂಜಿನ್‌ಗಳು" ಹಾಗೂ ಅವು ಆ ಸಾಮೀಪ್ಯ ಪ್ರಕ್ರಿಯೆಗಳಲ್ಲಿ ಭಾಗವಹಿಸಿದ ವ್ಯಕ್ತಿಗಳು ಮತ್ತು ಸಂದರ್ಭಗಳಿಂದಾಗಿ ಬದಲಾಗುತ್ತವೆ ಎಂಬುದನ್ನು ಸ್ಪಷ್ಟವಾಗಿಯೇ ಗುರುತಿಸಿತು. ಈ ಸಿದ್ಧಾಂತದ ಮುಂಚಿನ ಹಂತವನ್ನು ಪರೀಕ್ಷಿಸಲು ಹೊರಡುವ ಲೇಖಕರು ತಮ್ಮ ಉದ್ದೇಶವನ್ನು ನೇರವಾಗಿ ಹೇಳಿಕೊಳ್ಳಬೇಕು. ಹಾಗೆ ಮಾಡದಿದ್ದಲ್ಲಿ ಮತ್ತು ಸಿದ್ಧಾಂತದ ವಿಕಾಸದ ಹಂತದಲ್ಲಿನ ಮುಖ್ಯ ಬದಲಾವಣೆಗಳನ್ನು ಅವರು ಪರಿಗಣಿಸದಿದ್ದಲ್ಲಿ ಆಗ ಅದು ಸಿದ್ಧಾಂತದ ತಪ್ಪುನಿರೂಪಣೆಗೆ ದಾರಿ ಮಾಡಿಕೊಡುತ್ತದೆ.

ಮೊದಲ ಗುಂಪಿನ ಲೇಖಕರು ಸಾಮೀಪ್ಯ ಪ್ರಕ್ರಿಯೆಗಳಿಗೆ ಗಮನ ಕೊಡದೇ ಸಿದ್ಧಾಂತವು ಪೂರ್ಣವಾಗಿ ಬೆಳವಣಿಗೆಯ ಮೇಲಿನ ಸಂದರ್ಭದ ಪ್ರಭಾವಗಳ ಬಗೆಗೆ ಅಥವಾ ಕೇವಲ ಸಾಂದರ್ಭಿಕ ಮತ್ತು ವ್ಯಕ್ತಿಗಳ ಲಕ್ಷಣಗಳ ಬಗೆಗೆ ಇತ್ತು ಎಂಬಂತೆ ನೋಡಿದರು. ಈ ಗುಂಪಿನ ಮೂರು ಪ್ರಬಂಧಗಳು (ವೀಗಲ್, ಮಾರ್ಟಿನ್ ಮತ್ತು ಬೆನೆಟ್, 2005; ಯಿಂಗ್ ಮತ್ತು ಹಾನ್ 2006; ಯು ಮತ್ತು ಸ್ಟಿಫ್‌ಮನ್, 2007) 1979ರ ಪುಸ್ತಕದಲ್ಲಿ ಬ್ರಾನ್‌ಫೆನ್ ಬೆನ್ನರ್‌ರವರು ಹೆಚ್ಚು ಗಮನ ಕೊಟ್ಟ ಒಂದು ಅಥವಾ ಹೆಚ್ಚಿನ ಸಾಂದರ್ಭಿಕ "ವ್ಯವಸ್ಥೆಗಳ" ಬಗ್ಗೆ ಕೇಂದ್ರೀಕರಿಸಿದ್ದವು. ಈ ಗುಂಪಿನ ಉಳಿದ ಲೇಖಕರು (ಏಟ್ಚಬಾ-ಪೋರಿಯಾ, ಪೈಕ್ ಮತ್ತು ಡೀಟರ್-ಡೆಕ್ಕರ್ಡ್, 2004; ಡ್ರೇಕ್, ಜಾನ್‌ಸನ್-ರೀಡ್ ಮತ್ತು ಸಾಪೊಕೈಟ್ 2006; ಕುಲಿಕ್ ಮತ್ತು ರಯ್ಯಾನ್ 2006; ಪ್ವೆಬೆಲ್ ಮತ್ತು ಬ್ರೆ ಜೋಸೆಕ್ 2007) ಬೆಳವಣಿಗೆಯ ಮೇಲಿನ ಸಾಂದರ್ಭಿಕ ಪ್ರಭಾವಗಳು ಮತ್ತು ವ್ಯಕ್ತಿಗಳ ಪ್ರಭಾವಗಳ ಮೇಲೆ ಹೆಚ್ಚು ಗಮನ ಕೊಟ್ಟರು. ಲೇಖಕರ ಎರಡು ಗುಂಪುಗಳು (ಅಜಬಾ ಪೋರಿಯಾ ಮತ್ತು ಪೈಕ್ 2008; ಸ್ಟೀವರ್ಟ್ 2007) 1970ರ ಕೊನೆಯ ಭಾಗದಲ್ಲಿದ್ದ ರೀತಿಯ ಸಿದ್ಧಾಂತದ ಅಂತರ್ ಕ್ರಿಯಾತ್ಮಕ

ರೀತಿಯ ಮೇಲೆ ಒತ್ತು ನೀಡಿದರು; ಅದು ವ್ಯಕ್ತಿ ಪರಿಸರದ ಅಂತರ್ ಸಂಬಂಧಗಳ ಮೇಲೆ ಗಮನ ಕೇಂದ್ರೀಕರಿಸುವ ಒಂದು ಪರಿಸರವಾದೀ ನಿಲುಮೆಯಾಗಿದೆ. ಸ್ಟೀವರ್ಟರು "ಪರಿಸರವಾದೀ ಅಂಶಗಳ ಕೊಡುಗೆಯನ್ನು ಪರೀಕ್ಷಿಸಿದರು, (ವ್ಯಕ್ತಿಯ ಲಕ್ಷಣಗಳು ಮತ್ತು ಪರಿಸರ) ಹಾಗೂ ಅವು ಹೇಗೆ ಅಮೇರಿಕೆಯ ಆಫ್ರಿಕಾ ಹದಿಹರೆಯದವರ ಸಾಧನೆಗೆ ಪ್ರಭಾವ ಬೀರುತ್ತದೆಂದು" ತಿಳಿಯಲೆತ್ನಿಸಿದರು (ಪು 17) ಮತ್ತು ಅತ್ ಜಬಾ-ಪೋರಿಯ ಮತು ಪೈಕ್‌ರು "ಮಕ್ಕಳ ಲಕ್ಷಣಗಳು ತಂದೆ ತಾಯಿಯರ ವರ್ತನೆಯನ್ನು ಪ್ರಭಾವಿಸುತ್ತದೆಂದು... ಸಾಮೀಪ್ಯದ ಸಾಮಾಜಿಕ ಸಂದರ್ಭ... ಮತ್ತು ದೂರದ ಸಾಮಾಜಿಕ ಸಂದರ್ಭ" ಗಳ (ಪು 18) ವಾದವನ್ನು ಮುಂದಿಟ್ಟಿದ್ದರು. ಈ ಎಲ್ಲಾ ಅಧ್ಯಯನಗಳಲ್ಲೂ ಸಾಮೀಪ್ಯ ಪ್ರಕ್ರಿಯೆಗಳ ಹೆಸರು ಇರಲಿಲ್ಲ, ಅಳೆಯುವುದಂತೂ ದೂರವೇ ಉಳಿಯಿತು.

ಎರಡನೆಯ ಗುಂಪಿನ ಏಳು ಪ್ರಬಂಧಗಳಲ್ಲಿ (ಚೆನೋವೆತ್ ಮತ್ತು ಗಾಲಿಹರ್ 2004; ಡಲ್ಲಾ 2004; ಗ್ರೋಗನ್-ಕೇಲರ್ ಮತ್ತು ಓಟಸ್ 2007; ಜಾನ್‌ಸ್ಟನ್, ಸ್ಟಿಮ್, ಸಾಲ್ಟ್ಸಮನ್, ಡೀಟರ್-ಡೆಕ್ಕಾರ್ಡ್ ಮತ್ತು ಪೆಟ್ರಿಲ್, 2007; ಜೋನ್ಸ್ ಫೋರ್ ಹ್ಯಾಂಡ್, ಬ್ರೋಡಿ ಮತ್ತು ಅಮಿಸ್ಟೆಡ್, 2003; ಸಿಂಗಲ್ 2005; ವಾಯ್ ಡನಾಫ್, 2005) ಲೇಖಕರೆಲ್ಲರೂ ಬ್ರಾನ್‌ಫೆನ್ ಬೆನ್ನರ್‌ರವರ 1980ರ ವಿಚಾರಗಳನ್ನು ಪ್ರಾಥಮಿಕವಾಗಿ ಅವಲಂಬಿಸಿದ್ದರು. ಪ್ರತಿ ಲೇಖಕರ ಗುಂಪೂ ವ್ಯಕ್ತಿಗಳಿಗೆ ಸಂಬಂಧಿಸಿದ ಅಂಶಗಳ ಪ್ರಾಮುಖ್ಯತೆಯನ್ನು ಗುರುತಿಸಿದ್ದರೂ ಕೂಡಾ ತಮ್ಮ ಮುಖ್ಯ ಗಮನವನ್ನು ಸಂದರ್ಭದ ಪ್ರಭಾವಗಳ ಮೇಲೆ ಕೇಂದ್ರೀಕರಿಸಿದ್ದರು. ಚೆನೋವೆತ್ ಮತ್ತು ಗ್ಯಾಲಿಹರ್ ಅವರು ಪರಿಸರವಾದೀ ವ್ಯವಸ್ಥಾ ಸಿದ್ಧಾಂತವನ್ನು ತಾವು ಆಧಾರವಾಗಿಟ್ಟುಕೊಂಡು ಕಾಲೇಜು ವಿದ್ಯಾರ್ಥಿಗಳ ಆಕಾಂಕ್ಷೆಗಳ ಅಧ್ಯಯನವನ್ನು ಕೈಗೊಂಡೆವು ಎಂದು ಹೇಳುತ್ತಾ ಎರಡು ಲೇಖನಗಳನ್ನು ಉಲ್ಲೇಖಿಸಿದರು. (ಬ್ರಾನ್‌ಫೆನ್ ಬೆನ್ನರ್ 1977, 1986). ಆದರೆ ಅವೆರಡೂ ಲೇಖನಗಳು ಪರಿಸರವಾದೀ ವ್ಯವಸ್ಥಾ ಸಿದ್ಧಾಂತದ ಬಗ್ಗೆ ಏನೂ ಹೇಳಿರಲಿಲ್ಲ. ಅದಲ್ಲದೆ, ಅವರು ಮುಂದೆ ಹೇಳಿದ್ದೂ ಹೀಗಿದೆ, "ಬ್ರಾನ್‌ಫೆನ್ ಬೆನ್ನರ್ ಮಗುವಿನ ಮೇಲೆ ಪರಿಸರದಿಂದಾಗುವ ಅನೇಕ ಪ್ರಭಾವಗಳನ್ನು ಪರಿಗಣಿಸಿ ಮನುಷ್ಯನ ಬೆಳವಣಿಗೆಯನ್ನು ಸಾಂದರ್ಭಿಕವಾಗಿ ನೋಡಬೇಕೆಂದು ಪ್ರಸ್ತಾಪಿಸಿದ್ದಾರೆ (ಪು 1)." ಅಂದರೆ ಇಲ್ಲಿ ಸಿದ್ಧಾಂತವು ಸಂದರ್ಭದ ಪ್ರಭಾವಗಳನ್ನು ಕುರಿತು ಹೇಳುತ್ತದೆಂದು ತಿಳಿಸಿದ್ದಾರೆ. ಅದೇ ರೀತಿ ಸಿಂಗಲ್‌ರು ಬ್ರಾನ್‌ಫೆನ್ ಬೆನ್ನರ್‌ರ "ಜೈವಿಕ ಪರಿಸರವಾದೀ ಚೌಕಟ್ಟನ್ನು" ಅಳವಡಿಸಿಕೊಳ್ಳುವ ಬಗೆಗೆ ಪ್ರಸ್ತಾಪಿಸಿದರೂ, 1979 ರ ಪ್ರಬಂಧ ಮತ್ತು 1992 ರಲ್ಲಿ ಪುನರ್‌ಮುದ್ರಣಗೊಂಡ 1989ರ ಅಧ್ಯಾಯದ ವಿಚಾರಗಳನ್ನು ಮಾತ್ರ ತೆಗೆದುಕೊಂಡಿದ್ದರು ಅದರ ಜೊತೆಗೆ ಆಕೆ ತಮ್ಮದೇ ರೀತಿಯಲ್ಲಿ ಸಿದ್ಧಾಂತದ ಚೌಕಟ್ಟನ್ನು ಅರ್ಥೈಸಿಕೊಂಡಿದ್ದರು ಮತ್ತು ಈ ರೀತಿ ಹೇಳಿದ್ದರು "ಗೂಡಿನಲ್ಲಿಟ್ಟ ರಶಿಯನ್ ಗೊಂಬೆಗಳ ಗುಂಪಿನ ಉಪಮೆಯ ಬಗ್ಗೆ ಬ್ರಾನ್‌ಫೆನ್ ಬೆನ್ನರ್‌ರು ವಾದಿಸುವುದೇನೆಂದರೆ ಹಲವಾರು ಹತ್ತಿರದ ಮತ್ತು ದೂರದ

ಬಲಗಳು ವ್ಯಕ್ತಿಯ ಬೆಳವಣಿಗೆಯನ್ನು ಪ್ರಭಾವಿಸುತ್ತವೆ" (ಪುಟ 240). ಇಲ್ಲಿ ಸಿಂಗಲ್‌ರವರು ಹಲವು ಬಗೆಯ ಸಂದರ್ಭಗಳ ವ್ಯವಸ್ಥೆಗಳಿಗೆ ವಿಶೇಷ ಗಮನ ಕೊಟ್ಟರು ಎಂಬುದು ವಿದಿತವಾಗುತ್ತದೆ. ಬ್ರಾನ್‌ಫೆನ್ ಬೆನ್ನರ್‌ರವರನ್ನು ಉಲ್ಲೇಖಿಸುತ್ತಾ (1989) ಬ್ರಾನ್‌ಫೆನ್ ಬೆನ್ನರ್‌ವರ ಪರಿಸರವಾದಿ ವ್ಯವಸ್ಥಾ ಸಿದ್ಧಾಂತದ ಚೌಕಟ್ಟನ್ನು ತಾನು ಬಳಸಿಕೊಳ್ಳುತ್ತೇನಾದರೂ (ಪುಟ 667), ಕೆಲಸ-ಕುಟುಂಬಗಳ ನಡುವಿನ ಸಂಬಂಧಗಳ ದತ್ತಾಂಶವನ್ನು ಬ್ರಾನ್‌ಫೆನ್ ಬೆನ್ನರ್‌ರವರು ಆ ಹೊತ್ತಿಗೆ ಪ್ರತಿಪಾದಿಸುತ್ತಿದ್ದ ರೀತಿಯಲ್ಲಿ ವ್ಯವಸ್ಥಿತವಾಗಿ ವಿಶ್ಲೇಷಿಸಬಹುದಿತ್ತು ಎಂದು ವಾಯ್‌ಡನಾಫ್ ಸಹ ಹೇಳುತ್ತಾರೆ. ಸಿದ್ಧಾಂತವು ಕೇವಲ ಬೆಳವಣಿಗೆಯ ಮೇಲಿನ ಸೂಕ್ಷ್ಮ ವ್ಯವಸ್ಥೆ ಮತ್ತು ನಡುವಿನ ವ್ಯವಸ್ಥೆಗಳ ಪ್ರಭಾವಗಳ ಬಗೆಗೆ ಮಾತ್ರ ಇದೆ ಎಂಬಂತೆ ವಾಯ್ಡ್ನಾಫ್‌ರು ನೋಡಿದ್ದರು. ಅದಲ್ಲದೆ, ಈ ಯಾವ ಅಧ್ಯಯನಗಳು ಕೂಡಾ ಈ ಸಿದ್ಧಾಂತದ ಪರಿಪಕ್ವ ರೂಪವನ್ನು ಪರಿಗಣಿಸುವುದು ಒತ್ತಟ್ಟಿಗಿರಲಿ, 1983ರಿಂದ 1989 ರ ವರೆಗೂ ಬ್ರಾನ್‌ಫೆನ್ ಬೆನ್ನರ್‌ರವರು ವಾದ ಮಾಡಿದಂತೆ ವ್ಯಕ್ತಿ-ಪ್ರಕ್ರಿಯೆ-ಸಂದರ್ಭದ ಒಂದು ವ್ಯವಸ್ಥಿತ ವಿಶ್ಲೇಷಣೆಯನ್ನೂ ಸಹ ಮಾಡಿಲ್ಲ.

ಜೋನ್ಸ್ ಫ್ಲೋರ್ ಹ್ಯಾಂಡ್, ಬ್ರೋಡಿ, ಮತ್ತು ಅಮಿಸ್ಟೆಡ್ (2003) ರು ತಾವು "ಹಲವು ಬಗೆಯ ಪರಿಸರಗಳಲ್ಲಿ ವಾಸಿಸುವ ವಿವಿಧ ಕುಟುಂಬಗಳನ್ನು ಪರಸ್ಪರ ಪ್ರತ್ಯೇಕವಾಗಿರುವ 'ವ್ಯವಸ್ಥೆ'ಗಳಂತೆ ಕಾಣದೆ, ಕೌಟುಂಬಿಕ ವರ್ತನೆಯನ್ನು ಒಟ್ಟಾಗಿ ಪ್ರಭಾವಿಸುವ ವ್ಯವಸ್ಥೆಗಳೆಂದು ಕಾಣಬೇಕು" ಎಂಬ ಬ್ರಾನ್‌ಫೆನ್‌ಬೆನ್ನರ್‌ರ ನಿಲುವಿನಿಂದ 'ಬಹಿರ್ಗಣನೆ' (ಅನುಮಾನ) ಮಾಡಿದ್ದೇವೆ ಎಂದು ವಾದಿಸುತ್ತಾರೆ (ಪು 437). ಸರಿಯಾಗಿ ಹೇಳಬೇಕೆಂದರೆ, ಜೋನ್ಸ್ ಮತ್ತವರ ಸಹೋದ್ಯೋಗಿಗಳು ಪಾಲಕರ ನಿಗಾ ವಹಿಸುವಿಕೆಯನ್ನು ಅಧ್ಯಯನ ಮಾಡುವಾಗ ಅದರ ಒಳಗೆ "ಸಂರಚನಾತ್ಮಕ ವ್ಯತ್ಯಾಸಗಳು" (ಉದಾಹರಣೆಗೆ ಕುಟುಂಬದ ಲಕ್ಷಣಗಳು ಹಾಗೂ ನೆರೆ ಹೊರೆಯವರು) ಮತ್ತು "ಮನೋ-ವೈಜ್ಞಾನಿಕ ವ್ಯತ್ಯಾಸಗಳು" (ತಾಯಿಯ ಖಿನ್ನತೆ ಮಗುವಿನ ಸಮಸ್ಯಾತ್ಮಕ ವರ್ತನೆ, ಮತ್ತು ಮಕ್ಕಳು ಸಾಕುವಾಗಿನ ಸಮಯದಲ್ಲುಂಟಾಗುವ ತಿಕ್ಕಾಟ) ಎರಡನ್ನೂ ಒಳಗೊಂಡಿದ್ದಾರೆ. ಅವು ಕೂಡಾ ತಂದೆ ತಾಯಿಯರ ಮಕ್ಕಳ ಪೋಷಣೆಯಲ್ಲಿ ಪ್ರಭಾವ ಬೀರಬಹುದು ಎಂಬುದು ಅವರ ವಾದ. ಆದರೆ ಅವರು ಬ್ರಾನ್‌ಫೆನ್ ಬ್ರೆನ್ನರ್‌ರವರ 1970 ಮತ್ತು 1980 ರ ಅವಧಿಯ ವಾದವಾದ ವ್ಯಕ್ತಿ-ಸಂದರ್ಭಗಳ ಅಂತರ್ ಕ್ರಿಯೆಗಳ ಸಿದ್ಧಾಂತವನ್ನು ಇಲ್ಲಿ ನೆನೆಯಲಿಲ್ಲ ಅಥವಾ ಪರೀಕ್ಷೆಗೊಳಪಡಿಸಲಿಲ್ಲ. ಗ್ರೋಗನ್ ಕೇಲರ್ ಮತ್ತು ಓಟಿಸ್ (2007) ರವರು ಈ ವಿಷಯದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ, ಏಕೆಂದರೆ ಅವರು 1979 ರ ಪುಸ್ತಕವನ್ನು ಮತ್ತು 1980ರ ಪ್ರಬಂಧವೊಂದನ್ನು ತಮ್ಮ ಅಧ್ಯಯನಕ್ಕೆ ಆಧಾರವಾಗಿರಿಸಿಕೊಂಡಿದ್ದರು, ಅಂತೆಯೇ ಡಲ್ಲಾ (2004) ರವರು ಸಹ 1989 ರ ಅಧ್ಯಾಯವೊಂದನ್ನು ಆಧರಿಸಿ ತಮ್ಮ ಅಧ್ಯಯನ ನಡೆಸಿದರು. ಎರಡು ಪ್ರಬಂಧಗಳಲ್ಲಿ ಬೆಳವಣಿಗೆಯನ್ನು ವ್ಯಕ್ತಿ ಮತ್ತು ಪರಿಸರಗಳ ಲಕ್ಷಣಗಳ ಜಂಟಿ ಕ್ರಿಯೆಯೆಂಬಂತೆ ಪರಿಗಣಿಸಿ, ಇವುಗಳನ್ನು

ಬೆಳವಣಿಗೆಯ ಮುಖ್ಯಾಂಶವನ್ನಾಗಿ ಸೇರಿಸಲಾಯಿತು. ಚಾರಿತ್ರಿಕ ಘಟನೆಗಳು ಮತ್ತು ಸನ್ನಿವೇಶಗಳು ಹೇಗೆ ಬೆಳವಣಿಗೆಯನ್ನು ಪ್ರಭಾವಿಸುತ್ತವೆ ಎಂಬ ಬ್ರಾನ್‌ಫೆನ್ ಬೆನ್ನರ್‌ರ ನಿಲುವನ್ನು ಆಧರಿಸಿ ಡಲ್ಲಾ ಅವರು ಕಾಲಾನುಕ್ರಮದ ವ್ಯವಸ್ಥೆಯ ಕೆಲವು ಅಂಶಗಳನ್ನು ನಿರೂಪಿಸುತ್ತಾರೆ. ಜಾನ್ ಸ್ಟನ್, ಸ್ವಿಮ್, ಸಾಲ್ಟ್ಸಮನ್, ಡೀಟರ್–ಡೆಕಾರ್ಡ್ ಮತ್ತು ಪೆಟ್ರಿಲ್ (2007)ರು ಬ್ರಾನ್‌ಫೆನ್ ಬೆನ್ನರ್‌ರ 1986 ಮತ್ತು 1979ರ ಪುಸ್ತಕಗಳನ್ನು ಆಧರಿಸಿ, ತಾವು ವ್ಯಕ್ತಿ ಪ್ರಕ್ರಿಯೆ ಸಂದರ್ಭದ ವಿನ್ಯಾಸವನ್ನು ಉಪಯೋಗಿಸಿಕೊಳ್ಳುತ್ತಿರುವುದಾಗಿಯೂ, ಬ್ರಾನ್‌ಫೆನ್ ಬೆನ್ನರ್‌ರವರ ಮತ್ತು ಕ್ರೌಟರ್ (1983) ಇದನ್ನು ಈ ಮೊದಲು ಚರ್ಚಿಸಿದ್ದಾರೆಂದು ತಿಳಿಸಿದರು. ದುರದೃಷ್ಟವಶಾತ್ ಸಿದ್ಧಾಂತದ ಪರಿಪಕ್ವ ಮಾದರಿಯನ್ನು ಅನ್ವಯಿಸಲು, ಆ ಸಮಯದಲ್ಲಿ ಪ್ರಕ್ರಿಯೆಯನ್ನು ಸಾಮೀಪ್ಯ ಪ್ರಕ್ರಿಯೆಯಾಗಿ ಕಲ್ಪಿಸಿಕೊಂಡಿರಲಿಲ್ಲವಾಗಿದ್ದರಿಂದ ಸಿದ್ಧಾಂತದ ಮುನ್ನೆಲೆಯಲ್ಲಿಡಲು ಸಾಧ್ಯವಾಗಲಿಲ್ಲ. ಅಲ್ಲದೆ ಜಾನ್ ಸ್ಟನ್ ಮತ್ತು ಆಕೆಯ ಸಹೋದ್ಯೋಗಿಗಳ ಬಳಿ ಈ ಉದ್ದೇಶಕ್ಕಾಗಿ ಬಳಸಲು ಸಾಕಷ್ಟು ದತ್ತಾಂಶಗಳಿದ್ದರೂ ಪ್ರಕ್ರಿಯೆಗಳನ್ನು ಬ್ರಾನ್‌ಫೆನ್ ಬೆನ್ನರ್ ಅಂದುಕೊAಡ ರೀತಿಯಲ್ಲಿ, ಅವರ ಸಿದ್ಧಾಂತದ ಒಂದು ಪರಿಪಕ್ವ ಮಾದರಿಯನ್ನು ಪರಿಗಣಿಸಿದ್ದಾರೆ ಎಂದುಕೊಳ್ಳುವುದಕ್ಕೆ ಈ ಪ್ರಬಂಧದಲ್ಲಿ ಪುರಾವೆಗಳಿಲ್ಲ. ಉದಾಹರಣೆಗೆ, "ತಾಯಂದಿರು ಯಾವ ಬಗೆಯಲ್ಲಿ ಜನಾಂಗೀಯ, ಬುಡಕಟ್ಟುಗಳ, ಸಾಂಸ್ಕೃತಿಕ ಸಾಮಾಜೀಕರಣ ಪದ್ಧತಿಗಳಲ್ಲಿ ತೊಡಗಿಕೊಂಡಿದ್ದರು ಎಂಬುದರಲ್ಲಿ ಅವರಿಗೆ ಆಸಕ್ತಿ ಇತ್ತು; ಮತ್ತು, ಜನಾಂಗೀಯ, ಬುಡಕಟ್ಟು ಮತ್ತು ಸಾಂಸ್ಕೃತಿಕ ಸಾಮಾಜೀಕರಣ ಹಾಗೂ ಮಗು ಅದಕ್ಕೆ ಹೊಂದಿಕೊಳ್ಳುವುದರ ನಡುವಿನ ಸಂಬಂಧದ ಬಗೆಗೂ ಆಸಕ್ತಿ ಇತ್ತು" (ಪುಟ 398). ಸಾಂಸ್ಕೃತಿಕ ಸಾಮಾಜೀಕರಣ ಪದ್ಧತಿಯನ್ನು ಅಳೆಯಲು ಅವರು ತಾಯಂದಿರನ್ನು ಅವರು ಬೇರೆ ಬೇರೆ ಪದ್ಧತಿಗಳಲ್ಲಿ ತೊಡಗಿಕೊಳ್ಳುವ ಅವಧಿ ಎಷ್ಟು ಎಂದು ಪ್ರಶ್ನಿಸಿದರು. ವಾರದಲ್ಲಿ ಹಲವು ಬಾರಿ ಅಥವಾ ಇಲ್ಲವೇ ಇಲ್ಲ ಎಂಬ ಬಗೆಯ ಉತ್ತರಗಳು ಬಂದವು. ಇದೂ ಅಲ್ಲದೆ ಲೇಖಕರು ದತ್ತು ಮಕ್ಕಳ ವಯಸ್ಸು ಹಾಗೂ ಹುಟ್ಟಿದ ದೇಶವನ್ನು (ಕೊರಿಯಾ ಅಥವಾ ಚೈನಾ) ಸಹ ಗಣನೆಗೆ ತೆಗೆದುಕೊಂಡಿದ್ದರು. ತಾತ್ವಿಕವಾಗಿ, ಈ ಎಲ್ಲ ದತ್ತಾಂಶಗಳನ್ನು ಪಿಪಿಸಿಟಿ ಮಾದರಿಯ ಮೂಲಕ ವಿಶ್ಲೇಷಿಸಬಹುದಾಗಿತ್ತು.

ಅಂತಿಮ ಭಾಗದಲ್ಲಿ ಐದು ಗುಂಪಿನ ಲೇಖಕರು (ಬುಟೇರಾ 2005: ಹೊಸ್ಸೈನ್ 2001 ಜೋರ್ಡಾನ್ 2005: ಮೆಕ್‌ಡೂಗಲ್, ಡೀವಿಟಿ, ಕಿಂಗ ಮಿಲ್ಲರ್ ಮತ್ತು ಕಿಲ್ಲಿಪ್ 2004: ವಾಕ್ರನ್ 2005) 1990ರ ಕಾರ್ಯವನ್ನು ಅವಲಂಬಿಸಿ ಸಿದ್ಧಾಂತದ ಪರಿಪಕ್ವ ಮಾದರಿಯನ್ನು ಉಪಯೋಗಿಸಿಕೊಂಡರು. ದುರದೃಷ್ಟಕರವೆಂಬಂತೆ ಈ ಗುಂಪುಗಳಿಂದ ಹೊರಬಿದ್ದ ಮೂರು ಪ್ರಬಂಧಗಳ ಲೇಖಕರು ಈ ಸಿದ್ಧಾಂತವನ್ನು, ಅದು ಕೇವಲ ಬೆಳವಣಿಗೆ ಹೊಂದುತ್ತಿರುವ ವ್ಯಕ್ತಿಗಳ ಮೇಲಿನ ಸಂದರ್ಭದ ಪ್ರಭಾವಗಳ ಸಿದ್ಧಾಂತ ಎಂದು ಅಂದುಕೊಳ್ಳುವುದರಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಉದಾಹರಣೆಗೆ,

ಜೋರ್ಡಾನ್ ತಾವೇ ಹೇಳಿರುವಂತೆ ಆಕೆ ಪರಿಸರವಾದಿ ವ್ಯವಸ್ಥಾ ಸಿದ್ಧಾಂತವನ್ನು ಮನೆ ಮತ್ತು ಶಾಲೆಯಲ್ಲಿ ಬಳಕೆಯಲ್ಲಿರುವ ಮಾಧ್ಯಮಗಳ ಅಧ್ಯಯನಕ್ಕೆಂದು ಬಳಸಿದ್ದರು. ಆದರೆ ಆಕೆ ಬರೆಯುವಂತೆ, "ಈ ಸಂಶೋಧನೆಯು ಬ್ರಾನ್‌ಫೆನ್ ಬ್ರೆನ್ನರ್ ಮತ್ತು ಮರ್ರಿಸ್ (1958) ರ 'ಮಕ್ಕಳು ಒಂದರೊಳಗೊಂದು ನೆಲೆಸಿದ ವಾತಾವರಣಗಳಲ್ಲಿ ಬೆಳೆಯುತ್ತಾರೆ' ಎಂಬ ಸೈದ್ಧಾಂತಿಕ ಗ್ರಹಿಕೆಯನ್ನು ಆಧರಿಸಿದೆ (ಪುಟ 525)." ವರ್ರೆನ್ ಅವರು ತಮ್ಮ ಸಣ್ಣ ಮಕ್ಕಳ ದೂರದರ್ಶನ ವೀಕ್ಷಣೆಯ ಅಧ್ಯಯನದಲ್ಲಿ "ಬ್ರಾನ್‌ಫೆನ್ ಬೆನ್ನರ್‌ರವರ ಸಿದ್ಧಾಂತವನ್ನು ಪರೀಕ್ಷಿಸುವ ಬಗೆಗೆ" ಸ್ಪಷ್ಟವಾಗಿ ಬರೆಯುತ್ತಾರೆ (ಪುಟ 850). ಅದನ್ನು, "ಬ್ರಾನ್‌ಫೆನ್ ಬೆನ್ನರ್‌ರವರ (1979, 2005) ಮಕ್ಕಳ ಬೆಳವಣಿಗೆಯ ಪರಿಸರವಾದೀ ಸಿದ್ಧಾಂತಕ್ಕೆ ಸಂವಾದಿಯಾಗಿರುವ ಒಂದು ಸಂಬಂಧಗಳ ಗುಂಪಿನ ಆಧಾರಕಲ್ಪನೆಯನ್ನು ರೂಪಿಸುವ ಮೂಲಕ ಮಾಡಬೇಕು," ಎಂದು ವಾರೆನ್ ಹೇಳುತ್ತಾರೆ (ಪುಟ 845). ನವಾಜೊ ಕುಟುಂಬಗಳಲ್ಲಿ ಮನೆವಾರ್ತೆಯ ಕೆಲಸದ ಹಂಚಿಕೆ ಮತ್ತು ಮನೆವಾರ್ತೆಯ ಕೆಲಸಗಳು ಹೇಗೆ ನಿರ್ವಹಿಸಲ್ಪಡುತ್ತವೆ ಎಂಬುದನ್ನು ಅಧ್ಯಯನ ಮಾಡಿದ ಹೋಸ್ಸೈನ್ ಅವರು ವಾದಿಸುವ ಪ್ರಕಾರ ಅಲ್ಲಿ ಕೆಲಸಗಳು ಮೀಸಲಾತಿಯಿಲ್ಲದೆ ನಡೆಯುತ್ತಿದ್ದವು ಮತ್ತು "ಅಲ್ಲಿ ಕೌಟುಂಬಿಕ ಪಾತ್ರಗಳ ಮತ್ತು ಅವುಗಳ ಕಾರ್ಯ ನಿರ್ವಹಣೆಯ ಸಾಂಸ್ಕೃತಿಕ ಸಂದರ್ಭಗಳನ್ನು ಅರ್ಥ ಮಾಡಿಕೊಳ್ಳಲು ಮನುಷ್ಯರ ಪರಿಸರವಾದಿ ಮಾದರಿಯ ಬಳಕೆಯಾಗುತ್ತಿತ್ತು ಎಂಬ ವಿಚಾರಕ್ಕೆ ಅಧ್ಯಯನದಿಂದ ಹೊರಬಂದ ಮಾಹಿತಿಯು ಪುಷ್ಟಿ ನೀಡುತ್ತದೆ (ಬ್ರಾನ್‌ಫೆನ್ ಬೆನ್ನರ್ ಮತ್ತು ಮರ್ರಿಸ್ 1998, ಪುಟ 258, 259). ಆದರೆ ಇಲ್ಲಿ ಎಲ್ಲಿಯೂ ಪಿಪಿಸಿಟಿ ಮಾದರಿಯನ್ನಾಗಲೀ, ಅಥವಾ ಸಾಮೀಪ್ಯ ಪ್ರಕ್ರಿಯೆಗಳ ಮೌಲ್ಯಮಾಪನವಾಗಲೀ ಮಾಡದಿರುವುದು ಆಶ್ಚರ್ಯಕರವೆನ್ನಿಸುತ್ತದೆ. ಅದರ ಬದಲು ವರ್ರೆನ್ ಬೆಳವಣಿಗೆಯ ನಾಲ್ಕು ಸಾಂದರ್ಭಿಕ ವ್ಯವಸ್ಥೆಗಳ ಮೇಲೆ, ಅಂದರೆ ಸೂಕ್ಷ್ಮದಿಂದ ದೊಡ್ಡ ಹಂತದವರೆಗೆ ಕೇಂದ್ರೀಕರಿಸಿದರು, ಮತ್ತು ಹೊಸ್ಸೈನ್ ರವರು ಈ ಸಿದ್ಧಾಂತವು ಸಂದರ್ಭದ ಪ್ರಭಾವಗಳನ್ನು ಕುರಿತು ಮಾತ್ರ ಇದೆ ಎಂಬಂತೆ ನೋಡಿದರು. ಅವರು ಹೇಳುವಂತೆ "ಒಬ್ಬರ ಕುಟುಂಬ, ಸಾಂಸ್ಕೃತಿಕ ಮೌಲ್ಯಗಳು, ಆರ್ಥಿಕ ಪದ್ಧತಿಗಳು ಮತ್ತು ಚಾರಿತ್ರಿಕ ಘಟನೆಗಳಂತಹ ಸುತ್ತಲಿನ ಪರಿಸರದ ಅಂಶಗಳು ಖಂಡಿತಾ ಒಂದು ನಿರ್ದಿಷ್ಟ ಸಾಂಸ್ಕೃತಿಕ ಸನ್ನಿವೇಶದಲ್ಲಿನ ಲಿಂಗಾಧಾರಿತ ಪಾತ್ರಗಳನ್ನು ನಿರ್ಮಿಸಲು ಮತ್ತು ರೂಪಿಸಲು ಕಾರಣವಾಗುತ್ತವೆ (ಪುಟ 256)."

ಬುಟೇರಾರವರು (2005) ತಮ್ಮ 1998 ರ ಪ್ರಬಂಧದಲ್ಲಿ "ಈ ದೃಷ್ಟಿಕೋನವನ್ನು ಮಕ್ಕಳ ಸುತ್ತಲಿನ ವ್ಯವಸ್ಥೆಗಳನ್ನು ಮತ್ತು ಅವರ ಕುಟುಂಬಗಳನ್ನು ಪರೀಕ್ಷಿಸಲು, ಹಾಗೂ ಸಹಯೋಗ ಮತ್ತು ವಿಶೇಷ ಶಿಕ್ಷಣದ ಮೇಲೆ ಆಗುವ ಸಾಂದರ್ಭಿಕ ವ್ಯತ್ಯಾಸಗಳ ಪ್ರಭಾವವನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಬಳಸಬಹುದಾಗಿದೆ" ಎಂದು ವಾದಿಸುತ್ತಾರೆ (ಪುಟ 107). ಉಳಿದೆಲ್ಲ ಉಲ್ಲೇಖಗಳೂ ಸಹ ಬ್ರಾನ್‌ಫೆನ್ ಬ್ರೆನ್ನರರ 1999ರ ಪುಸ್ತಕವನ್ನು

ಆಧರಿಸಿ ಇರುವುದು ನಮಗೆ ಅಚ್ಚರಿ ನೀಡುವುದಿಲ್ಲ. ಬುಟೇರಾ ಅವರಿಗೆ ಪಿಪಿಸಿಟಿ ಮಾದರಿಯ ಬಗ್ಗೆ ಏನು ಹೇಳುವುದೂ ಇರಲಿಲ್ಲವಾದರೂ ಆಕೆ ಈ ಸಿದ್ಧಾಂತದ ಮೊದಲ ರೂಪದ ಸಂವಹನಾತ್ಮಕ ಸ್ವರೂಪದ ಬಗೆಗೆ ಉಲ್ಲೇಖಿಸುತ್ತಾರೆ ಮತ್ತು “ವ್ಯಕ್ತಿಗಳ ಲಕ್ಷಣಗಳು ಫಲಿತಕ್ಕೆ ಸಾಕಷ್ಟು ಕೊಡುಗೆ ನೀಡುತ್ತವೆ” ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ಅಂತಿಮವಾಗಿ, ಮೆಕ್ ಡುಗಲ್, ಡೀವಿಟ್, ಕಿಂಗ್, ಮಿಲ್ಲರ್ ಮತ್ತು ಕಿಲ್ಲಿಪ್ ರವರು (2004) ಬ್ರಾನ್‌ಫೆನ್ ಬ್ರೆನ್ನರ್‌ರವರ 1990ರ ಹಲವು ಪ್ರಬಂಧಗಳನ್ನು ಹೆಸರಿಸಿ, ಜೈವಿಕ ಪರಿಸರವಾದೀ ದೃಷ್ಟಿಕೋನವು ವ್ಯಕ್ತಿ ಲಕ್ಷಣಗಳ ಸಾಂದರ್ಭಿಕ ಅಂಶಗಳು ಮತ್ತು ಸಾಮೀಪ್ಯ ಪ್ರಕ್ರಿಯೆಗಳ ಅನ್ಯೋನ್ಯ ಕ್ರಿಯೆ ಎಂದು ವರ್ಣಿಸಿದರು. ಈ ಲೇಖಕರು ವ್ಯಕ್ತಿ ಲಕ್ಷಣಗಳು (ವಯಸ್ಸು, ಲಿಂಗ ಮತ್ತು ಶಾಲಾ ಸಾಧನೆ) ಮತ್ತು ಸಾಂದರ್ಭಿಕ ಅಂಶಗಳು (ಸಾಮಾಜಿಕ ಆರ್ಥಿಕ ಅಂತಸ್ತು, ಕುಲೀನತೆ ಮತ್ತು ಶಾಲಾ ಸಂಸ್ಕೃತಿ) ಗಳ ಮಧ್ಯೆ ಸ್ಪಷ್ಟ ಸಂಬಂಧಗಳನ್ನು ಕಂಡರು. ಆದರೆ, ಓರಗೆಯವರ ಮತ್ತು ಶಿಕ್ಷಕ-ವಿದ್ಯಾರ್ಥಿ ಒಡನಾಟಗಳನ್ನು ಸಾಮೀಪ್ಯ ಪ್ರಕ್ರಿಯೆಗೆ ಬದಲಾಗಿ ಪ್ರಾಥಮಿಕ ಸಾಂದರ್ಭಿಕ ಅಂಶವೆAದು (ಶಾಲಾ ಸಂಸ್ಕೃತಿ) ವಿಶೇಷವಾಗಿ ಪರಿಗಣಿಸಿದರು. ಮೆಕ್ ಡೂಗಲ್, ಮತ್ತು ಆಕೆಯ ಸಹೋದ್ಯೋಗಿಗಳು ಪಿಪಿಸಿಟಿ ಮಾದರಿಯ ನಾಲ್ಕನೆಯ ಹಂತವನ್ನು ಬಿಟ್ಟು ಬಿಟ್ಟರು ಮತ್ತು ವಿವಿಧ ವರ್ಗಗಳ ಜನರ ಒಂದು ಪ್ರಾತಿನಿಧಿಕ ಮಾದರಿಯ ಅಧ್ಯಯನ (ಕ್ರಾಸ್-ಸೆಕ್ಷನಲ್ ಅಧ್ಯಯನ) ನಡೆಸುವುದು ಎಷ್ಟು ಕಷ್ಟವೆಂಬುದನ್ನು ಅವರು ಒಪ್ಪಿಕೊಂಡರೂ ಅದನ್ನು ಒಂದು ಸೈದ್ಧಾಂತಿಕ ಮಿತಿಯೆಂದು ಬಣ್ಣಿಸಲಿಲ್ಲ.

***ಚರ್ಚೆ:***

ನಾವು ಈ ಪ್ರಬಂಧದಲ್ಲಿ ಮುಂಚೆ ವಾದಿಸಿದಂತೆ, ಸಿದ್ಧಾಂತವು ವಿಕಾಸವಾದಿ ಅಧ್ಯಯನಗಳು ಮತ್ತು ಕುಟುಂಬಗಳ ಅಧ್ಯಯನಗಳಲ್ಲಿ ಮುಖ್ಯವಾದ ಪಾತ್ರವಹಿಸುತ್ತದೆ ಎಂದಾದರೆ ಅದನ್ನು ಸಂಶೋಧನೆಯಲ್ಲಿ ಸಮರ್ಪಕವಾಗಿ ಅನ್ವಯಿಸಬೇಕು. ಅದರಲ್ಲಿ ತಪ್ಪಿದರೆ, ಅದನ್ನು ಸೂಕ್ತವಾಗಿ ಪರೀಕ್ಷೆ ಮಾಡಿಲ್ಲವೆಂದಾಗುತ್ತದೆ; ಸಿದ್ಧಾಂತವನ್ನು ತಪ್ಪಾಗಿ ವಿವರಿಸಿದರೆ ಸಿದ್ಧಾಂತಕ್ಕೆ ಪುರಾವೆಗಳನ್ನು ಒದಗಿಸುತ್ತವೆ ಎಂದು ತೋರುವ ದತ್ತಾಂಶಗಳು ಆ ಕೆಲಸವನ್ನು ಮಾಡುವುದಿಲ್ಲ. ಅದನ್ನೇ ಹಿಡಿದು ಹೊರಟರೆ ತಪ್ಪಾಗಿ ನಿರೂಪಿಸಲ್ಪಟ್ಟ ಒಂದು ಸಿದ್ಧಾಂತವು ಪುರಾವೆಗಳನ್ನು ಒದಗಿಸದ ದತ್ತಾಂಶಗಳಿಂದ ಬೇಧಿಸಲು ಅಸಾಧ್ಯವಾಗಬಹುದು.

2001 ಮತ್ತು 2008ರ ನಡುವಿನ ಅವಧಿಯಲ್ಲಿ ಪ್ರಕಟಿಸಲ್ಪಟ್ಟ ಈ 25 ಪ್ರಬಂಧಗಳಲ್ಲಿ, ನಾಲ್ಕು ಮಾತ್ರ ಸಿದ್ಧಾಂತದ ಪರಿಪಕ್ವ ರೂಪವನ್ನು ಸೂಕ್ತವಾಗಿ ತಮ್ಮ ಸಂಶೋಧನೆಯಲ್ಲಿ ಉಪಯೋಗಿಸಿಕೊಂಡಿವೆ. ಇದಕ್ಕೆ ಒಂದು ಸಾಮಾನ್ಯ ಕಾರಣ ಹೀಗಿರಬಹುದು, ಕೆಲವು ವಿದ್ವಾಂಸರು ‘ಬೆಳೆಯುತ್ತಿರುವ ವ್ಯಕ್ತಿಗಳ

ಮೇಲೆ ಅವರ ಸುತ್ತಲಿನ ಸಂದರ್ಭಗಳು ಪ್ರಭಾವ ಬೀರುತ್ತವೆ ಅಥವಾ ಸನ್ನಿವೇಶಗಳು ಮತ್ತು ವ್ಯಕ್ತಿಗಳು ಸ್ವತಃ ಪ್ರಭಾವ ಬೀರಬಹುದು' ಎಂಬ ತಮ್ಮ ನಿಲುವಿಗೆ ಕೆಲವು ಸೈದ್ಧಾಂತಿಕ ಪುಷ್ಟೀಕರಣವನ್ನು ಬಯಸಿರಬಹುದು. ಈ ಸತ್ಯವನ್ನು ಬೆಂಬಲಿಸಲು ಸೈದ್ಧಾಂತಿಕ ಬಲವೇನೂ ಬೇಡವಾಗಿತ್ತು, ಈ ಲೇಖಕರು, ಬ್ರಾನ್‌ಫೆನ್ ಬ್ರೆನ್ನರರ ಹೆಸರನ್ನು ಸುಮ್ಮನೆ ಉಪಯೋಗಿಸಿ ತೃಪ್ತಿ ಪಟ್ಟಿರಬಹುದು; ಆದರೆ ತಮ್ಮ ಸಂಶೋಧನೆಯು ಬೆನ್ನರ್‌ರವರ ಸಿದ್ಧಾಂತ ಅಥವಾ ಮಾದರಿ ಅಥವಾ ವಿನ್ಯಾಸವನ್ನು ಆಧರಿಸಿದೆ ಎಂದೇ ಹೇಳುತ್ತಾರೆ.

ಯಾರು ಬ್ರಾನ್‌ಫೆನ್ ಬ್ರೆನ್ನರ್‌ರವರ ಸಿದ್ಧಾಂತವನ್ನು ಉಪಯೋಗಿಸಿಕೊಂಡಿದ್ದೇವೆಂದು ಹೇಳಿಕೊಂಡಿದ್ದಾರೆಯೋ ಅಂತಹ ಕೆಲವು ವಿದ್ವಾಂಸರು ಅವರ ಸಿದ್ಧಾಂತದಲ್ಲಾದ ಬದಲಾವಣೆಗಳ ಬಗ್ಗೆ ತಿಳಿದಿಲ್ಲವೆಂದು ಹೇಳಬಹುದೇ? ಈ ರೀತಿಯ ವಾದಕ್ಕೆ ಸ್ವಲ್ಪ ಪುಷ್ಟೀಕರಣ ಸಿಗಬಹುದು, ಏಕೆಂದರೆ ಕೆಲವು ಸಂಶೋಧಕರಿಗೆ ಕೆಲವು ಪುಸ್ತಕಗಳ ಅಧ್ಯಾಯಗಳು ತಿಳಿದಿಲ್ಲದಿರಬಹುದು (ಉದಾ: ಬ್ರಾನ್‌ಫೆನ್ ಬ್ರೆನ್ನರರ, 1993, 1994, 1995, 1990), ಏಕೆಂದರೆ ಅವು ಸಮಕಾಲೀನ ವಿದ್ವಾಂಸರಿAದ ಪರಿಷ್ಕೃತವಾಗಿ ನಿಯತಕಾಲಿಕಗಳಲ್ಲಿ ಪ್ರಕಟವಾಗದೆ ಇದ್ದಿರಬಹುದು. ಬ್ರಾನ್‌ಫೆನ್ ಬ್ರೆನ್ನರರ (1979) ಪುಸ್ತಕದಲ್ಲಿ ಸಿದ್ಧಾಂತದ ಮೊದಲ ರೂಪವನ್ನು ಕೊಟ್ಟ ಅಧ್ಯಾಯಗಳು ಸಾಕಷ್ಟು ಪ್ರಸಾರವಾಗಿ, ನಂತರ ಬಂದ ಕೆಲವು ಅಧ್ಯಾಯಗಳು ಅಷ್ಟು ಪ್ರಸಾರವಾಗದಿರಬಹುದು. ಆದರೆ 1998ರ ಹ್ಯಾಂಡ್‌ಬುಕ್ ಆಫ್ ಚೈಲ್ಡ್ ಡೆವಲಪ್‌ಮೆಂಟ್ ಪುಸ್ತಕದ ಅಧ್ಯಾಯಗಳು ಸಿಗುವುದಿಲ್ಲವೆಂದರೆ ನುಂಗಲಾಗದ ವಿಷಯವಾಗುತ್ತದೆ. ಕಾಲಾಂತರದಲ್ಲಿ ಸಾಕಷ್ಟು ಬದಲಾವಣೆಗಳನ್ನು ಹೊಂದಿದ ಸಿದ್ಧಾಂತವೊಂದನ್ನು ಅದರ ಕರ್ತೃವೇ ಆ ಸಿದ್ಧಾಂತವು ಬದಲಾಗಿದೆಯೆಂದು ಗುರುತಿಸಿರುವಾಗ (ನೋಡಿ, ಬ್ರಾನ್‌ಫೆನ್ ಬ್ರೆನ್ನರ್ 1989, 1999) ಮತ್ತು 1970 ರ ತಮ್ಮ ಪುಸ್ತಕವನ್ನು ಕೇವಲ ಪ್ರಾಥಮಿಕ ಅಧ್ಯಯನದ ಸಲುವಾಗಿ ಮಾತ್ರ ಬಳಸಿ ಎಂದು ಅವರು ಹೇಳಿರುವ ಸನ್ನಿವೇಶದಲ್ಲಿಯೂ ಆ ಪುಸ್ತಕವನ್ನೆ ಸಿದ್ಧಾಂತದ ಅಂತಿಮ ರೂಪ ಎಂಬಂತೆ ಗ್ರಹಿಸಿ ತಮ್ಮ ಅಧ್ಯಯನ ಕೈಗೊಂಡಿರುವುದು ಆಶ್ಚರ್ಯವಾಗುತ್ತದೆ, 9 ಮಂದಿ ಲೇಖಕರು ಹೀಗೆ ಮಾಡಿದ್ದಾರೆ. ನಿಕೃಷ್ಟ ಪರಿಸ್ಥಿತಿಯೆಂದರೆ, ಈ ಲೇಖಕರು ಈ ಸಿದ್ಧಾಂತವು ಕೇವಲ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಸಂದರ್ಭ ವ್ಯವಸ್ಥೆಗಳನ್ನು ಕುರಿತು ಇದೆ ಎಂಬಂತೆ ಪರಿಗಣಿಸಿರುವುದು, ಮತ್ತು ಸಿದ್ಧಾಂತದ ಪರಿಸರವಾದೀ ಸ್ವರೂಪವನ್ನು ಗಣನೆಗೇ ತೆಗೆದುಕೊಳ್ಳದಿರುವುದು ಆಶ್ಚರ್ಯಕರವೆನ್ನಿಸುತ್ತದೆ.

ಉಳಿದ ಕೆಲ ವಿದ್ವಾಂಸರು ಸಿದ್ಧಾಂತದ ಹೆಚ್ಚು ಪರಿಷ್ಕೃತ ಭಾಗವನ್ನಾದರೂ, ಅಂದರೆ 1980ರ ನಂತರ ಆವೃತ್ತಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ಅಷ್ಟು ಹೊತ್ತಿಗೆ ಬ್ರಾನ್‌ಫೆನ್ ಬ್ರೆನ್ನರ್ ಸಾಮೀಪ್ಯ ಪ್ರಕ್ರಿಯೆಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದು, ಅದು ವ್ಯಕ್ತಿ ಮತ್ತು ಸನ್ನಿವೇಶಗಳನ್ನು ಒಳಗೊಂಡ ಪ್ರಕ್ರಿಯೆ ಎಂದು ವರ್ಣಿಸಿದ್ದರು. ಆದರೂ ಕೂಡ,

ತಮ್ಮ ಸಿದ್ಧಾಂತವನ್ನು ಬೆನ್ನರ್‌ರವರು "ಪರಿಸರ ವ್ಯವಸ್ಥಾ ಸಿದ್ಧಾಂತ" ಎಂದು ಕರೆಯುತ್ತಾರೆ ಎಂಬುದೊಂದನ್ನು ಉಲ್ಲೇಖಿಸಿದ (ಬ್ರಾನ್‌ಫೆನ್ ಬ್ರೆನ್ನರ್ 1989) ಈ ಲೇಖಕರು ಸಿದ್ಧಾಂತದ ವ್ಯವಸ್ಥಾ ಭಾಗವನ್ನು ತಮ್ಮ ಸಂಶೋಧನೆಯಲ್ಲಿ ಅನ್ವಯಿಸಲಿಲ್ಲ. ಇದ್ದಿದ್ದರಲ್ಲಿ ಕೆಲವು ಸಂಶೋಧಕರು ಬೆಳವಣಿಗೆ ಮತ್ತು ಸನ್ನಿವೇಶಗಳ ನಡುವಿನ ಪರಸ್ಪರ ಅವಲಂಬನೆಯನ್ನು ಪರೀಕ್ಷೆಗೆ ಒಳಪಡಿಸುವ ಅಗತ್ಯವನ್ನು ಗುರುತಿಸುತ್ತಾರೆ. ಆದರೆ ಈ ಗುಂಪಿನಲ್ಲಿ ಉಳಿದವರು ಬ್ರಾನ್‌ಫೆನ್ ಬ್ರೆನ್ನರ್‌ರವರು ಬೆಳವಣಿಗೆಯ ಮೇಲೆ ಸನ್ನಿವೇಶಗಳಿಂದಾಗುವ ಪ್ರಭಾವಗಳ ಬಗ್ಗೆ ಆಸಕ್ತಿ ಇದ್ದ ಒಬ್ಬ ಸಿದ್ಧಾಂತಿ ಮಾತ್ರ ಎಂಬ ರೀತಿಯಲ್ಲಿಯೇ ಬರೆದರು.

ಸಿದ್ಧಾಂತದ ಪರಿಪಕ್ವ ರೂಪವನ್ನು ಉಲ್ಲೇಖಿಸಿದ ಮಾತ್ರಕ್ಕೆ ಸಂಶೋಧನೆಯಲ್ಲಿ ಸಿದ್ಧಾಂತವನ್ನು ಸಮರ್ಪಕ ರೀತಿಯಲ್ಲಿ ಅನ್ವಯಿಸಲಾಗಿದೆ ಎಂದು ಹೇಳಲು ಬರುವುದಿಲ್ಲ (ಬ್ರಾನ್‌ಫೆನ್ ಬ್ರೆನ್ನರ್ 1994, 1995, 2001/2005; ಬ್ರಾನ್‌ಫೆನ್ ಬ್ರೆನ್ನರ್ ಮತ್ತು ಸೆಸಿ 1994; ಬ್ರಾನ್‌ಫೆನ್ ಬ್ರೆನ್ನರ್ ಮತ್ತು ಮರಿ್ರಸ್ 1995). ಬ್ರಾನ್‌ಫೆನ್ ಬ್ರೆನ್ನರ್ ರವರ 1990ರ ಕೆಲಸವನ್ನು ಉಪಯೋಗಿಸಿಕೊಂಡಿರುವ 9 ಪ್ರಬಂಧಗಳಲ್ಲಿ ನಾಲ್ಕು ಪ್ರಬಂಧಗಳು ಸಿದ್ಧಾಂತದ ಪ್ರಾಥಮಿಕ ರೂಪವನ್ನೇ ನೆಚ್ಚಿಕೊಂಡಿರುವುದು ಗೊತ್ತಾಗುತ್ತದೆ; ಬೆನ್ನರ್‌ರವರ ಸಿದ್ಧಾಂತವು ಸಾಂದರ್ಭಿಕ ಪ್ರಭಾವಗಳ ಅಥವಾ ವ್ಯಕ್ತಿ-ಸಂದರ್ಭಗಳ ನಡುವಿನ ಕೊಡುಕೊಳೆಯ ಸಿದ್ಧಾಂತವೆಂದಷ್ಟೇ ಅಲ್ಲಿ ಪರಿಗಣಿಸಲಾಗಿದೆ, ಸಿದ್ಧಾಂತದ ಮುಖ್ಯ ಭಾಗವಾದ ಸಾಮೀಪ್ಯ ಪ್ರಕ್ರಿಯೆಗಳಿಗೆ ಗಮನ ಕೊಡಲೇ ಇಲ್ಲ. ಕೇವಲ ನಾಲ್ಕು ಪ್ರಬಂಧಗಳ ಲೇಖಕರು ಮಾತ್ರ ಪ್ರಕ್ರಿಯೆ-ವ್ಯಕ್ತಿ-ಸಂದರ್ಭ ಸಮಯಗಳ ಮಾದರಿಯನ್ನು ತಮ್ಮ ಸಂಶೋಧನೆಯಲ್ಲಿ ಸರಿಯಾಗಿ ಉಪಯೋಗಿಸಿದ್ದಾರೆ. ಬಹಳಷ್ಟು ಮಂದಿ ಲೇಖಕರು ತಮ್ಮ ಸಂಶೋಧನೆಗಳಲ್ಲಿ ಸಾಂದರ್ಭಿಕ ವ್ಯತ್ಯಾಸಗಳನ್ನು (ಉದಾಹರಣೆಗೆ ಸಾಮಾಜಿಕ ವರ್ಗಗಳಿಗೆ ಸಂಬಂಧಿಸಿದ) ಅಥವಾ ವ್ಯಕ್ತಿ ಲಕ್ಷಣಗಳನ್ನು (ಉದಾ: ಲಿಂಗ) ಉಪಯೋಗಿಸಿ, ವರ್ಗ ಲಿಂಗಗಳ ಅಂತರ್ ಕ್ರಿಯೆಯನ್ನು ತಮ್ಮ ಆಸಕ್ತಿಗನುಗುಣವಾಗಿ ಪರೀಕ್ಷಿಸಿರಬಹುದು. ಆ ಸಂಶೋಧನೆಯು ಆಸಕ್ತಿಕರವಾಗಿರಬಹುದು, ಆದರೆ ಅದರ ಅರ್ಥ ಅಲ್ಲಿ ಬ್ರಾನ್‌ಫೆನ್ ಬ್ರೆನ್ನರ್ ಸಿದ್ಧಾಂತದ ಪರೀಕ್ಷೆ ನಡೆದಿದೆ ಎನ್ನಲು ಬರುವುದಿಲ್ಲ.

ಯಾವುದೇ ವಿಶಿಷ್ಟ ಸಿದ್ಧಾಂತವನ್ನು ಆಧಾರವಾಗಿಟ್ಟುಕೊಳ್ಳುವ ಸಂಶೋಧಕರು ಆ ಸಿದ್ಧಾಂತದ ಪರಿಷ್ಕೃತ ಆವೃತ್ತಿಯನ್ನೇ ಬಳಸಬೇಕು ಎಂದೋ ಅಥವಾ ಆ ಸಿದ್ಧಾಂತವನ್ನು ಇಡಿಯಾಗಿ ಬಳಸಬೇಕು ಎಂದೋ ಇಲ್ಲ. ಸಂಶೋಧಕರು ಯಾವುದೇ ಒಂದು ಸಿದ್ಧಾಂತದ ವಿಶಿಷ್ಟ ಭಾಗಗಳನ್ನು ಅಥವಾ ಸಿದ್ಧಾಂತದ ಹಳೆಯ ರೂಪನ್ನು ಉಪಯೋಗಿಸಿಕೊಳ್ಳಬಹುದು, ಆದರೆ ಈ ಪ್ರಸಂಗದಲ್ಲಿ ಸೀಮಿತ ಗುರಿಯನ್ನು ಸ್ಪಷ್ಟ ಪಡಿಸಬೇಕಾಗುತ್ತದೆ, ಇಲ್ಲದಿದ್ದರೆ ಅಲ್ಲಿ ಪರಿಕಲ್ಪನಾತ್ಮಕ ಅಥವಾ ಸೈದ್ಧಾಂತಿಕ ಸ್ಪಷ್ಟತೆ ಇಲ್ಲವೆಂದು

ತಿಳಿಯಬೇಕಾಗುತ್ತದೆ. ಪಿಯಾಜೆರವರ ಸಿದ್ಧಾಂತದ ಬಗ್ಗೆ ಸಂಶೋಧಕರು 1960ರ ನಂತರದ ಅವರ ಯೋಚನೆಯನ್ನು ಪರಿಗಣಿಸದಿದ್ದಲ್ಲಿ (ಅವರು ಪ್ರಾಥಮಿಕವಾಗಿ ಬೆಳವಣಿಗೆಯ ಹಂತಗಳಿಂದ ಅಥವಾ ವಿನ್ಯಾಸದ ಅಂಶಗಳಿಂದ ಬದಲಾವಣೆಗಳ ರೀತಿಗಳ ಬಗ್ಗೆ ಹೆಚ್ಚು ಕೇಂದ್ರೀಕರಿಸಿದ್ದು) ಸರಿಯೆನ್ನಿಸುವುದಿಲ್ಲ. ಅಂತೆಯೇ ಬಂಡೂರರವರ ಸಾಮಾಜಿಕ ಪ್ರಜ್ಞಾ ಸಿದ್ಧಾಂತದ ಬಗ್ಗೆ ಸಂಶೋಧಿಸುವವರು ಅವರ ಮುಂಚಿನ ಸಾಮಾಜಿಕ ಕಲಿಕೆಯ ಸಿದ್ಧಾಂತವನ್ನು ಮಾತ್ರ ಉಪಯೋಗಿಸಿಕೊಂಡರೆ ಸಂಶೋಧನೆಯು ಸೂಕ್ತವಾದದ್ದೆನ್ನಿಸುವುದಿಲ್ಲ. ದುರಾದೃಷ್ಟವೆಂದರೆ ಹಲವಾರು ಮಂದಿ ವಿದ್ವಾಂಸರು (ಹಾಗೂ ಅವರ ವಿದ್ವತ್ತಿನ ಬಗ್ಗೆ ಬರೆಯುವವರು) ಬ್ರಾನ್‌ಫೆನ್ ಬ್ರೆನ್ನರ್ ಸಿದ್ಧಾಂತವನ್ನು ಬರಿಯ ಸೂಕ್ಷ್ಮ ವ್ಯವಸ್ಥೆ ಅಥವಾ ದೊಡ್ಡ ವ್ಯವಸ್ಥೆಯು ಬೆಳವಣಿಗೆಯ ಮೇಲೆ ಬೀರುವ ಪ್ರಭಾವಗಳನ್ನು ಕುರಿತ ಸಿದ್ಧಾಂತ ಎಂದೇ ಪರಿಗಣಿಸಿರುವುದು.

ಬ್ರಾನ್‌ಫೆನ್ ಬ್ರೆನ್ನರ್‌ರವರ ಸಿದ್ಧಾಂತದ ಪರಿಪಕ್ವ ರೂಪವನ್ನು ವಿದ್ವಾಂಸರು ಪರಿಗಣಿಸುವುದಿಲ್ಲವೆಂದರೆ, ಅದು ಸಂಶೋಧನಗೆ ಸೂಕ್ತವಾಗಿ ಅನ್ವಯಿಸಲು ಕಷ್ಟವಾಗುತ್ತದೆಂಬುದು ಕೊನೆಯ ಕಾರಣವಾಗಿರಬಹುದು. ಬ್ರಾನ್‌ಫೆನ್ ಬ್ರೆನ್ನರ್ ಅವರೇ ಈ ಹಲವಾರು ಸಂಬಂಧಗಳನ್ನು ತಮ್ಮ ಲೇಖನಗಳಲ್ಲಿ ತೋರಿಸಬಹುದಿತ್ತು, ಸಂಶೋಧನೆಗೆ ಅನ್ವಯಿಸಲು ಸೂಕ್ತವಾದ ಮಾದರಿಗಳನ್ನು ಹೇಳಬಹುದಿತ್ತು. ಅವರು ತಾನು ಹೇಗೆ ಸೂಕ್ತ ಪದ್ಧತಿಯನ್ನು ಉಪಯೋಗಿಸಿಕೊಂಡೆ ಎಂಬುದನ್ನು ತನ್ನ ಸಂಶೋಧನೆಯಲ್ಲಿ ಬರೆಯಲಿಲ್ಲ, ಅದರ ಬದಲು ಉಳಿದವರ ಸಂಶೋಧನೆಗಳ ಬಗ್ಗೆ ಟೀಕೆ ಮಾಡಿದರು. ಅವು ಯಾವುದೂ ಸಿದ್ಧಾಂತದ ಪರೀಕ್ಷೆಯ ಸೂಕ್ತವಾದ ಮಾದರಿಯಾಗಿರಲಿಲ್ಲ. ಅಲ್ಲದೆ, ಅಧ್ಯಯನವೊಂದರಲ್ಲಿ ಪ್ರತಿಯೊಂದು ಭಾಗವನ್ನು ಪರಿಗಣಿಸಬೇಕೆಂದರೆ, ಆಗ ಸಂಶೋಧನೆಯು ಬಹಳ ದೀರ್ಘವಾಗುತ್ತದೆ ಹಾಗೂ ಸಂಕೀರ್ಣವಾದುದು ಆಗುತ್ತದೆ. ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ, ವ್ಯಕ್ತಿಗಳ ಲಕ್ಷಣಗಳ ಬಗ್ಗೆ ಅವರು ಬರೆದಿದ್ದೆಲ್ಲವನ್ನೂ - ಬೇಡಿಕೆ, ಬಲ ಮತ್ತು ಸಂಪನ್ಮೂಲ, ಅದರ ಜೊತೆಗೆ ಎಲ್ಲಾ ಜೈವಿಕ ಅಂಶಗಳನ್ನೂ ಒಳಗೊಂಡು- ಕಾಲಕಾಲಕ್ಕೆ ದತ್ತಾಂಶಗಳನ್ನು ಸಂಗ್ರಹಿಸುತ್ತಾ, ಸಂಶೋಧನೆಯನ್ನು ಚಾರಿತ್ರಿಕ ಕಾಲದ ಒಳಗೆ ಇಡುವ ಎರಡೂ ಪ್ರಕ್ರಿಯೆಗಳನ್ನು ಒಳಗೊಳ್ಳುವ ನಾಲ್ಕು ಬಗೆಯ ಸಾಂದರ್ಭಿಕ ವ್ಯವಸ್ಥೆಗಳು ಮತ್ತು ಕಾಲದ ಮೂರು ಅಂಶಗಳನ್ನು (ಸೂಕ್ಷ್ಮ, ಮಧ್ಯಂತರ ಮತ್ತು ವಿಶಾಲ) ಪರಿಗಣಿಸಿ. ಅದಲ್ಲದೆ, ಸಿದ್ಧಾಂತದ ಅತಿ ಮುಖ್ಯ ಭಾಗವಾದ ಸಾಮೀಪ್ಯ ಪ್ರಕ್ರಿಯೆಗಳನ್ನು ಅಧ್ಯಯನ ಮಾಡಲು ವ್ಯಕ್ತಿಗಳ ಬೆಳವಣಿಗೆಯ ಹಂತದಲ್ಲಿ ಅವರ ಬದುಕಿನಲ್ಲಿ ನಿಯಮಿತವಾಗಿ ಅವರಿಗೆ ಅತೀ ಮುಖ್ಯರಾದ ಜನರು, ಸಂಕೇತಗಳೊಡನೆ, ವಸ್ತುಗಳೊಡನೆ ನಡೆಯುವ ಕೊಡುಕೊಳೆಗಳು, ಚಟುವಟಿಕೆಗಳನ್ನು ದತ್ತಾಂಶದ ರೂಪದಲ್ಲಿ ಸಂಗ್ರಹಿಸುತ್ತಿರಬೇಕು ಎಂದರೆ ಅದು ಎಷ್ಟು ದೀರ್ಘವಾಗಬಹುದು.

ಆದರೆ, ಪ್ರತಿಯೊಂದು ಅಧ್ಯಯನದಲ್ಲೂ ಎಲ್ಲಾ ಬಗೆಯ ಅಂಶಗಳನ್ನು ಸೇರಿಸಬೇಕು ಎಂದು ಬ್ರಾನ್‌ಫೆನ್ ಬ್ರೆನ್ನರ್ ಸೂಚಿಸುವುದಿಲ್ಲ. ಅದನ್ನವರು ಹೇಳಿಯೂ ಇಲ್ಲ. ಅವರ ನಿಲುವು ನೇರವಾಗಿತ್ತು: ಪಿಪಿಸಿಟಿ ಮಾದರಿಯನ್ನು ಉಪಯೋಗಿಸಿಕೊಂಡ ಅಧ್ಯಯನಗಳೆಲ್ಲವೂ ಸಾಮೀಪ್ಯ ಪ್ರಕ್ರಿಯೆಗಳನ್ನು ಕೇಂದ್ರೀಕರಿಸಬೇಕು, ಯಾವ ರೀತಿಯಲ್ಲಿ ಬೆಳೆಯುವ ವ್ಯಕ್ತಿಯ ಲಕ್ಷಣಗಳು ಪ್ರಭಾವ ಬೀರುತ್ತವೆ ಮತ್ತು ಯಾವ ಸಂದರ್ಭಗಳಲ್ಲಿ ಅವು ನಡೆಯುತ್ತವೆ, ಮತ್ತು ಅವೆಲ್ಲವೂ ಹೇಗೆ ಬೆಳವಣಿಗೆಯ ಫಲಿತಗಳನ್ನು ಕೊಡುವಲ್ಲಿ ತೊಡಗಿಸಿಕೊಳ್ಳುತ್ತವೆ ಎಂಬುದನ್ನು ತೋರಿಸಬೇಕು. ಅವರ ಸಿದ್ಧಾಂತದ ಒಂದು ಸರಳ ಅನ್ವಯವು ಉದಾಹರಣೆಗೆ, ಪಾಲಕರು-ಮಗುವಿನ ನಡುವಿನ ಕೊಡುಕೊಳೆಗಳು ನಿಯಮಿತವಾಗಿ ನಡೆಯುವ ಬಗೆಗಳನ್ನು ಪರೀಕ್ಷಿಸಬಹುದು. ಈ ಕೊಡುಕೊಳೆಗಳು ಮಗುವಿನ ಯಾವುದೋ ಒಂದು ಮುಖ್ಯವಾದ ಲಕ್ಷಣಗಳನ್ನು (ಸುಲಭ ಉದಾಹರಣೆಗೆ ಮಗುವಿನ ಲಿಂಗ) ಅವಲಂಬಿಸಿ ಮತ್ತು ಸಂದರ್ಭಕ್ಕೆ ಸಂಬಂಧಿಸಿದ ಒಂದು ಅಂಶದ ದೆಸೆಯಿಂದ (ಬಹುಶಃ ಬೇರೆಯ ಕುಲದ ಜನಾಂಗದ ಅಥವಾ ಸಾಮಾಜಿಕ ವರ್ಗದ ಗುಂಪುಗಳಾಗಿರಬಹುದು) ಹೇಗೆ ವ್ಯತ್ಯಾಸ ಹೊಂದುತ್ತವೆ ಎನ್ನುವುದನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ಕೊನೆ ಪಕ್ಷ ಎರಡು ಅಂಶಗಳನ್ನಿಟ್ಟುಕೊಂಡಾದರೂ ಸಂಗ್ರಹಿಸಿದ ದತ್ತಾಂಶಗಳ ಮೂಲಕ, ಪಾಲಕರು-ಮಗುವಿನ ನಡುವಿನ ಕೊಡುಕೊಳೆಗೆ ಸಂಬಂಧಿಸಿದೆ ಎಂದು ತೋರುವ ಒಂದು ಫಲಿತವನ್ನು ಆರಿಸಿಕೊಂಡು ಪರೀಕ್ಷಿಸಬಹುದು. ಪಾಲಕರು-ಮಗುವಿನ ನಡುವಿನ ಕೊಡುಕೊಳೆಗಳ ದತ್ತಾಂಶಗಳನ್ನು ಸಂಗ್ರಹಿಸುವ ವಿಧಾನಗಳಲ್ಲಿ ವ್ಯತ್ಯಾಸಗಳಿರಬಹುದು. ಆದರೆ ಸತತವಾಗಿ ನಡೆಯುವ ಅಂತರ್ ಕ್ರಿಯೆಗಳನ್ನು ಅಳೆಯಲು ಅವು ಸೂಕ್ತವಾಗಿರಬೇಕಷ್ಟೇ. ಆದರೂ ಇಂತಹ ಅಧ್ಯಯನವನ್ನು ಸರಿಯಾಗಿ ಮಾಡಲು ಕಷ್ಟವೇನಿಲ್ಲ ಮತ್ತು ಬ್ರಾನ್‌ಫೆನ್ ಬ್ರೆನ್ನರ್ ಸಿದ್ಧಾಂತವನ್ನು ಸಮರ್ಪಕವಾಗಿ ಅನ್ವಯಿಸಿದಂತಾಗುತ್ತದೆ.

ಅಂತಿಮವಾಗಿ ನಾವು ಅಂದುಕೊಳ್ಳುವುದೇನೆಂದರೆ ಮಾನವನ ಬೆಳವಣಿಗೆ ಮತ್ತು ಕುಟುಂಬದ ಅಧ್ಯಯನಗಳನ್ನು ಮಾಡುವ ವಿದ್ವಾಂಸರು ಈ ಕ್ಷೇತ್ರಕ್ಕೆ ಅನ್ಯಾಯ ಮಾಡುತ್ತಿದ್ದಾರೆನ್ನಿಸುತ್ತದೆ. ಅವರು ತಮ್ಮ ಸಂಶೋಧನೆಗೆ ಸೈದ್ಧಾಂತಿಕ ಚೌಕಟ್ಟನ್ನು ಇಟ್ಟುಕೊಳ್ಳುತ್ತಾರೆ, ಆದರೆ ಆ ಸಿದ್ಧಾಂತವನ್ನೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ, ಜೊತೆಗೆ, ಸಿದ್ಧಾಂತವೊಂದು ಕಾಲಾಂತರದಲ್ಲಿ ವಿಕಾಸ ಹೊಂದುತ್ತದೆ ಎಂಬ ಅಂಶವನ್ನು ಸಹಾ ಪರಿಗಣಿಸುವುದಿಲ್ಲ ಹಾಗೂ, ಸೈದ್ಧಾಂತಿಕವಾಗಿ ಸಂಬಂಧಿತ ವಿಧಾನಗಳನ್ನು ಕೂಡಾ ಪರಿಗಣಿಸುವುದಿಲ್ಲ. ಪಿಯಾಜೆ ಅಥವಾ ವೈಗೋಟ್ಸ್ಕಿಯವರಂತಲ್ಲದೆ ಬ್ರಾನ್‌ಫೆನ್ ಬ್ರೆನ್ನರ್ ರವರ ಸಿದ್ಧಾಂತವು ಇಂಗ್ಲೀಷ್ ಮಾತನಾಡುವ ವಿದ್ವಾಂಸರಿಗೆಲ್ಲ ದಕ್ಕುತ್ತದೆ. ಅವರ ವಿಚಾರಗಳು ಕೇವಲ ಬೆಳವಣಿಗೆಗೆ ಸಂಬಂಧಪಟ್ಟ ಸಂದರ್ಭಗಳ ಸಿದ್ಧಾಂತವೆಂದು ಅಂದುಕೊಂಡರೆ, ಅಥವಾ ವ್ಯಕ್ತಿ ಪರಿಸರಗಳ ಅಂತರ್-ಕ್ರಿಯೆಗಳ ಪರೀಕ್ಷೆಯೆಂದುಕೊಂಡರೂ ಅದು ಅವರ

ಸಿದ್ಧಾಂತಕ್ಕೆ ಅನ್ಯಾಯ ಮಾಡಿದಂತೆನಿಸುತ್ತದೆ. ಈ ಸಿದ್ಧಾಂತವು ಮಾನವನ ಬೆಳವಣಿಗೆಯ ಬಗ್ಗೆ ನಮಗೆ ಒಳ್ಳೆಯ ಒಳನೋಟವನ್ನು ಮತ್ತು ಸರಿಯಾದ ತಿಳುವಳಿಕೆಯನ್ನು ಕೊಡುವುದರಿಂದ ಇದನ್ನು ಸೂಕ್ತವಾಗಿ ಪರೀಕ್ಷಿಸುವುದು ಯುಕ್ತ.

## ಆಧಾರ ಗ್ರಂಥಗಳು


Adamsons, K., O'Brien, M., & Pasley, K. (2007). An ecological approach to father involvement in biological and stepfather families. *Fathering, 5,* 129-147.

Atzaba-Poria, N., & Pike, A. (2008). Correlates of parenting for mothers and fathers from English and Indian backgrounds. *Parenting Science and Practice, 8,* 17-40.
Atzaba-Poria, N., Pike, A., & Deater-Deckard, K. (2004). Do risk factors for problem behavior act in a cumulative manner? An examination of ethnic minority and majority children through an ecological perspective. *Journal of Child Psychology and Psychiatry, 45,* 707–718.

Bronfenbrenner, U. (1977). Toward an experimental ecology of human development. *American Psychologist, 32*, 513-531.

Bronfenbrenner, U. (1979). *The ecology of human development: Experiments in nature and design*. Cambridge, MA: Harvard University Press.

Bronfenbrenner, U. (1986). Ecology of the family as a context for human development: Research perspectives. *Developmental Psychology*, *22*(6), 723-742.

Bronfenbrenner, U. (1988). Interacting systems in human development. Research paradigms: Present and future. In N. Bolger, A. Caspi, G. Downey, & M. Moorehouse (Eds.), *Persons in context: Developmental processes* (pp. 25-49). Cambridge: Cambridge University Press.

Bronfenbrenner, U. (1989). Ecological systems theory. In R. Vasta (Ed.), *Annals of child development, Vol. 6* (pp. 187-249). Greenwich, CT: JAI Press.

Bronfenbrenner, U. (1993). The ecology of cognitive development: Research models and fugitive findings. In R. Wonziak & K. Fischer (Eds.), *Development in context: Acting and thinking in specific environments* (pp. 3-44). Hillsdale, NJ: Erlbaum.

Bronfenbrenner, U. (1994). Ecological models of human development. In T. Husen & T. N. Postlethwaite (Eds.), *International Encyclopedia of Education* (2nd Ed., Vol. 3, pp. 1643-1647). Oxford, England: Pergamon Press.

Bronfenbrenner, U. (1995). Developmental ecology through space and time: A future perspective. In P. Moen, G. H. Elder, Jr., K. Lüscher (Eds.), *Examining lives in context: Perspectives on the ecology of human development* (pp. 619-647). Washington, DC: American Psychological Association.

Bronfenbrenner, U. (1999). Environments in developmental perspective: Theoretical and operational models. In S. L. Friedman & T. D. Wachs (Eds.), *Measuring environment*

*across the life span: Emerging methods and concepts* (pp. 3-28). Washington, DC: American Psychological Association Press.

Bronfenbrenner, U. (2005). The bioecological theory of human development. In U. Bronfenbrenner (Ed.), *Making human beings human: Bioecological perspectives on human development* (pp. 3-15). Thousand Oaks, CA: Sage. (Original work published 2001)

Bronfenbrenner, U. (2005). *Making human beings human: Bioecological perspectives on human development.* Thousand Oaks, CA: Sage Publications.

Bronfenbrenner, U. & Ceci, S. J. (1994). Nature-nurture reconceptualized in developmental perspective: A biological model. *Psychological Review, 101*, 568-586.

Bronfenbrenner, U., & Crouter, A. C. (1983). The evolution of environmental models in developmental research. In P. H. Mussen (Series Ed.) & W. Kessen (Vol. Ed.), *Handbook of child psychology, Vol. 1: History, theory, methods* (4th ed., pp. 357-414). New York: Wiley. Bronfenbrenner's theory 16

Bronfenbrenner, U., & Evans, G. W. (2000). Developmental science in the 21st century: Emerging questions, theoretical models, research designs and empirical findings. *Social Development, 9*(1), 115-125.

Bronfenbrenner, U. & Morris, P. A. (1998). The ecology of developmental processes. In W. Damon & R. M. Lerner (Eds.), *Handbook of child psychology, Vol. 1: Theoretical models of human development* (5th ed., pp. 993-1023). New York: John Wiley and Sons, Inc.

Bronfenbrenner, U., & Morris, P. A. (2006). The bioecological model of human development. In W. Damon & R. M. Lerner (Eds.), *Handbook of child psychology, Vol. 1: Theoretical models of human development* (6th ed., pp. 793-828). New York: John Wiley.
Butera, G. (2005). Collaboration in the context of Appalachia: The case of Cassie. *The Journal of Special Education, 39,* 106-116.

Campbell, F. A., Pungello, E. P., & Miller-Johnson, S. (2002). The development of perceived scholastic competence and global self-worth in African American adolescents from lowincome families: The roles of family factors, early educational intervention, and academic experience. *Journal of Adolescent Research, 17,* 277-302.

Chenoweth, E., & Galliher, R.V. (2004). Factors influencing college aspirations or rural west Virginia high school students. *Journal of Research in Rural Education, 19,* 1-14.

Dalla, R. (2004). "I fell off [the mothering] track:" Barriers to "effective mothering" among prostituted women. *Family Relations, 53,* 190-200.

Drake, B., Jonson-Reid, M., & Sapokaite, L. (2006). Rereporting of child maltreatment: Does participation in other public sector services moderate the likelihood of a second maltreatment report? *Child Abuse and Neglect, 30*, 1201-1226.

Elder, G. H., Jr. (1974). *Children of the great depression*. Chicago, IL: University of Chicago Press.

Elder, G. H., Jr. (1996). Human lives in changing societies: Life course and developmental insights. In R. B. Cairns, G. H. Elder, Jr., & E. J. Costello (Eds.), *Developmental science* (pp. 31-62). New York: Cambridge University Press.

Goldhaber, D.E. (2000). *Theories of human development: Integrative perspectives*. Mountain View, CA: Mayfield Publishing.

Grogan-Kaylor, A., & Otis, M. D. (2007). The predictors of parental use of corporal punishment. *Family Relations, 56,* 80-91.

Guba, E. G., & Lincoln, Y. S. (1994). Competing paradigms in qualitative research. In N. K. Denzin & Y. S. Lincoln (Eds.), *Handbook of qualitative research* (pp. 105-117). Thousand Oaks, CA: Sage.
Hossain, Z. (2001). Division of household labor and family functioning in off-reservation Navajo Indian families. *Family Relations, 50,* 255-261.

Johnston, K. E., Swim, J. K., Saltsman, B. M., Deater-Deckard, K., & Petrill, S. A. (2007). Mothers' racial, ethnic, and cultural, socialization of transracially adopted Asian children. *Family Relations, 56,* 390-402.

Jones, D. J., Forehand, R., Brody, G., & Armistead, L. (2003). Parental monitoring in African American, single mother-headed families: An ecological approach to the identification of predictors. *Behavior Modification, 27,* 435-457.

Jordan, A. B. (2005). Learning to use books and television: An exploratory study in the ecological perspective. *American Behavioral Scientist, 48,* 523-538.

Kulik, L. & Rayyan, F. (2006). Relationships between dual-earner spouses, strategies for coping with home-work demands and emotional well-being: Jewish and Arab-Muslim women in Israel. *Community, Work & Family, 9,* 457-477.

McDougall, J., DeWit, D. J., King, G., Miller, L. T., & Killip, S. (2004). High school-aged youths' attitudes toward their peers with disabilities: The role of school and student interpersonal factors. *International Journal of Disability, Development and Education, 51,* 287-313.

Moen, P., Elder, G. H. Jr., & Lüscher, K. (Eds.), *Examining lives in context: Perspectives on the ecology of human development*. Washington, DC: American Psychological Association.
Richters, J. E. (1997). The Hubble hypothesis and the developmentalist's dilemma. *Development and Psychopathology, 9*(2), 193-229.

Riggins-Caspers, K. M., Cadoret, R. J., Knutson, J. F., & Langbehn, D. (2003). Biologyenvironment interaction and evocative biology-environment correlation: Contributions of harsh discipline and parental psychopathology to problem adolescent behaviors. *Behavior Genetics, 33*(3), 205-220.

Schwebel, D. C. & Brezausek, C. M. (2007). The role of context in risk for pediatric injury. Influences from the home and child care environments. *Merrill-Palmer Quarterly, 53,* 105-130.

Singal, N. (2006). An ecosystemic approach for understanding inclusive education: An Indian case study. *European Journal of Psychology of Education, XXI,* 239-252.

Stewart, E. B. (2007). Individual and school structural effects on African American High School students' academic achievement. *The High School Journal, 91,* 16-34.
Tudge, J. R. H. (2008). *The everyday lives of young children: Culture, class, and child rearing in diverse societies.* New York: Cambridge University Press.

Tudge, J. R. H., Gray, J., & Hogan, D. M. (1997). Ecological perspectives in human development: A comparison of Gibson and Bronfenbrenner. In J. Tudge, M. Shanahan, & J. Valsiner (Eds.), *Comparisons in human development: Understanding time and context* (pp. 72-105). New York: Cambridge University Press.

Tudge, J. R. H., Odero, D. A., Hogan, D. M., & Etz, K. E. (2003). Relations between the everyday activities of preschoolers and their teachers' perceptions of their competence in the first years of school. *Early Childhood Research Quarterly, 18,* 42-64.

Tudge, J. R. H., & Scrimsher, S. (2003). Lev S. Vygotsky on education: A cultural-historical, interpersonal, and individual approach to development. In B. J. Zimmerman & D. H. Schunk (Eds.), *Educational psychology: A century of contributions* (pp. 207-228). Mahwah, NJ: Lawrence Erlbaum Associates.

Voydanoff, P. (2005). Social integration, work-family conflict and facilitation, and job and marital quality. *Journal of Marriage and Family, 67,* 666-679.

Warren, R. (2005). Parental mediation of children's television viewing in low-income families. *Journal of Communication, 55,* 847-863.

Weigel, D. J., Martin, S. S., & Bennett, K. K. (2005). Ecological influences of the home and child-care center of preschool-age children's literacy development. *Reading Research Quarterly, 40,* 204-233.

Winegar, L. T. (1997). Developmental research and comparative perspectives: Applications to developmental science. In J. Tudge, M. Shanahan, & J. Valsiner (Eds.), *Comparisons in human development: Understanding time and context* (pp. 13-33). New York: Cambridge University Press.

Bronfenbrenner's theory 18 Ying, Y. W. & Han, M. (2006). The effect of intergenerational conflict and school-based racial discrimination on depression and academic achievement in Filipino and American adolescents. *Journal of Immigrant and Refugee Studies, 4,* 19-35.
Yu, M. & Stiffman, A. R. (2007). Culture and environment as predictors of alcohol abuse/dependence symptoms in American Indian youths. *Addictive Behaviors, 32,* 2253-2259.